# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಂದಾಯ ಇಲಾಖೆ, ಕಲಬುರಗಿ ಜಿಲ್ಲೆ

**ಸಂಖ್ಯೆ:** ಕಂದಾಯ/ ಸಿಬ್ಬಂದಿ-1/ ಗ್ರಾಲೇನೇಮಕಾತಿ/ 17/ 2015-16 **ದಿನಾಂಕ:** 19.10.2015

## ಪ್ರಕಟಣೆ

ವಿಷಯ : ಕಲಬುರಗಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳ ನೇರ ನೇಮಕಾತಿ ಸಂಬಂಧ ಅಭ್ಯರ್ಥಿಗಳು ಮೂಲ ದಾಖಲಾತಿಯನ್ನು ಪಡೆಯುವ ಬಗ್ಗೆ

ಉಲ್ಲೇಖ:
1. ಈ ಕಾರ್ಯಾಲಯದ ಅಧಿಸೂಚನೆ ಸಮ ಸಂಖ್ಯೆ ದಿನಾಂಕ 27.06.2015.
2. ಈ ಕಾರ್ಯಾಲಯದ ಪ್ರಕಣೆ ಸಮ ಸಂಖ್ಯೆ ದಿನಾಂಕ 29.08.2015.
3. ಈ ಕಾರ್ಯಾಲಯದ ಪ್ರಕಣೆ ಸಮ ಸಂಖ್ಯೆ ದಿನಾಂಕ 29.09.2015.

000

ಕಲಬುರಗಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ 30 ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಉಲ್ಲೇಖ-1 ರ ಆದೇಶದ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು. ಉಲ್ಲೇಖ-3 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ 1:1 ಅನುಪಾತದಲ್ಲಿ ಮೇರಿಟ ಹಾಗೂ ಮೀಸಲಾತಿಯನ್ವಯ ಅಭ್ಯರ್ಥಿಗಳ ಅಂತಿಮ ಹಾಗೂ ಕಾಯ್ದಿರಿಸಿದ ಅರ್ಹ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳನ್ನು ದಿನಾಂಕ 17/11/2015 ರ ಬೆಳಿಗ್ಗೆ 11-00 ಘಂಟೆಯೊಳಗೆ ಜಿಲಾಧಿಕಾರಿಗಳ ಕಾರ್ಯಾಲಯದ ಕಲಬುರಗಿದಲ್ಲಿ ಈ ಕೆಳಕಂಡ ಮೂಲ ದಾಖಲೆಗಳ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಹಾಜರ್ ಇರತಕ್ಕದ್ದು. ಒಂದು ವೇಳೆ ಗೈರು ಹಾಜರ್ ಆದಲ್ಲಿ ನಿಮ್ಮನ್ನೇ ವೈಯಕ್ತಿಕ ಹೊಣೆಗಾರರೆಂದು ಪರಿಗಣಿಸಿ ಬೇರೆ (ಕಾಯ್ದಿರಿಸಿದ) ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.

1.ಪಿ.ಯು.ಸಿ ಮೂಲ ಅಂಕಪಟ್ಟಿ

2.ಎಸ್.ಎಸ್.ಎಲ್.ಸಿ.ಮೂಲ ಅಂಕಪಟ್ಟಿ

3.ಮೂಲ ಜಾತಿ ಮತ್ತು ಆದಾಯ ಪ್ರಮಾಣ
[ಎಸ್.ಸಿ/ಎಸ್.ಟಿ/ಪ್ರ.ವರ್ಗ-2ಎ/ಪ್ರವರ್ಗ-2ಬಿ/ಪ್ರವರ್ಗ-3ಎ/ಪ್ರವರ್ಗ-3ಬಿ]

4.ಮೂಲ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

5. ಮೂಲ ಕನ್ನಡ ಮಾಧ್ಯಮ ಅಭ್ಯರ್ಥಿ ಪ್ರಮಾಣ ಪತ್ರ

6.371(ಜೆ) ಅರ್ಹತಾ ಪ್ರಮಾಣ ಪತ್ರ (ಹೈದ್ರಾಬಾದ್ ಕರ್ನಾಟಕ ಮೀಸಲಾತಿ ಕೋರಿದ್ದಲ್ಲಿ ಮಾತ್ರ)

7.ಮೂಲ ಅಂಗವಿಕಲ ಪ್ರಮಾಣ ಪತ್ರ

8. ಅಂಗವಿಕಲ ಅಭ್ಯರ್ಥಿಗಳಿಗೆ ಜಿಲ್ಲಾ ಶಸ್ತ್ರಜ್ಞರು ಹಾಗೂ ಅಧಿಕ್ಷಕರು,ಜಿಲ್ಲಾ ಸರ್ಕಾರಿ ಆಸ್ಪತ್ರೆ ಕಲಬುರಗಿ ಇವರ ಪರಿಸೀಲನೆ ನಂತರ ಅದೇಶ ನೀಡಲಾಗುವುದು.

ನೇರ ನೇಮಕಾತಿ ಮೂಲಕ ಆಭ್ಯರ್ಥಿಗಳು ಆಯ್ಕೆ ಮಾಡಿ ನೇಮಕಾತಿ ಆದೇಶ ನೀಡುವ ಪೂರ್ವದಲ್ಲಿ ಅಭ್ಯರ್ಥಿಗಳು ಸಲ್ಲಿಸಿವ ಅಂಕಪಟ್ಟಿ, ಜಾತಿ/ ಶೈಕ್ಷಣಿಕ ಪ್ರಮಾಣಪತ್ರ ಹಾಗೂ ದಾಖಲೆ/ ಪ್ರಮಾಣ ಪತ್ರಗಳ ನೈಜತೆಯ ಸಂಬಂಧಪಟ್ಟ ಪ್ರಾಧಿಕಾರದ ಮೂಲಕ ಕೂಲಂಕುಷವಾಗಿ ಪರಿಶೀಲನೆ ಹಾಗೂ ಸಿಂದುತ್ವ ಪ್ರಮಾಣ ಪತ್ರವಾದನಂತರ ಅಭ್ಯರ್ಥಿಳಿಗೆ ಅಂತಿಮ ನೇಮಕಾತಿ ಆದೇಶ ನೀಡಲಾಗುವುದು

**ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು**
**ಗ್ರಾಮಲೆಕ್ಕಿಗರ ನೇಮಕಾತಿ ಪ್ರಾಧಿಕಾರ**
**ಕಲಬುರಗಿ ಜಿಲ್ಲೆ ಕಲಬುರಗಿ.**

**ಪ್ರತಿಯನ್ನು:-**

1. ಡಿಐಓ, ಎನ್ಐಸಿ ಕಲಬುರಗಿ ಇವರಿಗೆ ಸದರಿ ಪ್ರಕಟಣೆ ಹಾಗೂ ಅಂತಿಮ ಆಯ್ಕೆ ಪಟ್ಟಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.